# ಯುವಜನತೆಗೆ ಅಧ್ಯಾತ್ಮದ ಆವಶ್ಯಕತೆ- ಒಂದು ವಿಶ್ಲೇಷಣೆ

**ಪ್ರಭುಪ್ರಸಾದ್ ಎನ್.ಜಿ.**

ಯುವಜನತೆಯ ತುಡಿತವನ್ನು ಅರ್ಥಮಾಡಿಕೊಂಡು ಅವರಲ್ಲಿನ ಅರಿವಿನ ಕೊರತೆಗೆ ಸೂಕ್ತವಾದ ಪರಿಹಾರಗಳನ್ನು ಸೂಚಿಸಿರುವ ಲೇಖಕರು ಶೃಂಗೇರಿಯಲ್ಲಿ ವ್ಯಾಸಂಗ ಮಾಡುತ್ತಿರುವ ಯುವಕ. ಅಧ್ಯಾತ್ಮದಿಂದ ವ್ಯಕ್ತಿತ್ವದ ಪರಿಪೂರ್ಣತೆಯನ್ನು ಗಳಿಸಿಕೊಂಡು ಸಮಾಜದ ಸುಸ್ಥಿತಿಗೆ ಯುವಜನಾಂಗ ಹೇಗೆ ಕಾರಣವಾಗಬಹುದೆಂದು ಈ ಲೇಖನ ಸ್ಪಷ್ಟವಾಗಿ ತಿಳಿಸುತ್ತದೆ.

**ಅಧ್ಯಾತ್ಮ**—ಈ ಪದ ಕೇಳಿದೊಡನೆ ಮೂಗು ಮುರಿಯುವವರೇ ಹೆಚ್ಚು! ಅಧ್ಯಾತ್ಮ ಸಾಧನೆ, ಸತ್ಕಾರ್ಯ ಮೊದಲಾದವುಗಳೆಲ್ಲಾ ಕೇವಲ ವಯಸ್ಸಾದ ಮೇಲೆ ಪುರುಸೊತ್ತಿದ್ದಾಗ ಮಾಡಬೇಕಾದ ಕಾರ್ಯಗಳು ಎಂಬ ಭಾವನೆಯನ್ನು ನಮ್ಮಲ್ಲಿನ ಬಹುತೇಕ ಮಂದಿ ಹೊಂದಿದ್ದಾರೆ. ಆದರೆ ನಶ್ವರವಾದ ಈ ಪ್ರಪಂಚದಲ್ಲಿ ಈಶ್ವರನಾದ ಪರಮಾತ್ಮನೆಡೆಗೆ ಕರೆದೊಯ್ಯುವ ಹೆದ್ದಾರಿಯೇ ಈ ಅಧ್ಯಾತ್ಮ ಸಾಧನೆ ಎಂಬುದು ನಮ್ಮ ಹಿರಿಯರ ಅನುಭವವೇದ್ಯ ವಾಣಿಯಾಗಿದೆ. ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗಿ ನಮ್ಮ ಉನ್ನತ ವಿಚಾರಧಾರೆ, ಸಂಸ್ಕೃತಿಗಳಿಂದ ವಿಶೇಷವಾಗಿ ನಮ್ಮ ಯುವಜನತೆ ವಿಮುಖವಾಗುತ್ತಿದೆ. ದೇಶದ ಮುನ್ನಡೆಗೆ ಹಾಗೂ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಭೂತರಾದ ಯುವಜನತೆ ಅಧ್ಯಾತ್ಮಿಕ ಹಿನ್ನೆಲೆಯನ್ನು ಹೊಂದಿರುವುದು ಅತ್ಯಾವಶ್ಯಕ.

ಆಧ್ಯಾತ್ಮಿಕತೆಯು ಜೀವನದ ಎಲ್ಲಾ ಹಂತಗಳಿಗೂ ಅನ್ವಯಿಸುವಂತಹುದು. ನಿಜವಾದ ಆಧ್ಯಾತ್ಮಿಕತೆಯು ನಿಜ ಜೀವನದಿಂದ ಬೇರೆಯಾದುದಲ್ಲ. 'ಅಧ್ಯಾತ್ಮ' ಎಂದರೆ **ಅಧಿ+ಆತ್ಮ** ಅರ್ಥಾತ್, ಆತ್ಮಕ್ಕೆ ಸಂಬಂಧಿಸಿದ್ದು. ಆಧ್ಯಾತ್ಮಿಕತೆಯೆಂದರೆ ಅಂತರಂಗದಲ್ಲಿ ಸುಪ್ತವಾಗಿರುವ ದಿವ್ಯತೆಯ ಅಭಿವ್ಯಕ್ತಿ. ಆ ದಿವ್ಯತೆಯು ಜ್ಞಾನ, ವಿಶೇಷ ಪ್ರತಿಭೆ, ಒಳ್ಳೆಯತನ, ಆನಂದ, ಪ್ರೀತಿಯೇ ಮೊದಲಾದ ಉದಾತ್ತ ಗುಣಗಳಲ್ಲಿ ಅಭಿವ್ಯಕ್ತವಾಗುತ್ತದೆ. ನಿಃಸ್ವಾರ್ಥ ಪ್ರೀತಿ, ಒಳ್ಳೆಯತನ, ಸೇವಾಮನೋಭಾವಗಳು ದಿವ್ಯತೆಯ ಅಭಿವ್ಯಕ್ತಿಯಾದುದರಿಂದ ಇಂತಹ ಗುಣಗಳನ್ನು ರೂಢಿಸಿಕೊಳ್ಳುವ ಪ್ರಯತ್ನವೂ ಆಧ್ಯಾತ್ಮಿಕತೆಯೇ. ಈ ಗುಣಗಳಿಲ್ಲದೆ ಯುವಜನತೆ ಪಡೆದ ಜ್ಞಾನವು ಸಾರ್ಥಕವಾಗುವುದರ ಬದಲಾಗಿ ಧ್ವಂಸಕಾರಿಯಾಗುತ್ತದೆ. ಅಂತಃಸಾಮ್ರಾಜ್ಯದ ಒಡೆತನವೇ ಶ್ರೇಷ್ಠವಾದ ಆಧ್ಯಾತ್ಮಿಕತೆ. ಧ್ಯಾನ, ಪ್ರಾರ್ಥನೆ, ಆತ್ಮವಿಮರ್ಶೆಗಳ ಮೂಲಕ ಈ ಒಡೆತನವನ್ನು ಸಾಧಿಸಬೇಕು. ಮನಸ್ಸು, ಇಂದ್ರಿಯಗಳು ನಮ್ಮ ವಶವಾದಾಗ, ಭಾವೋದ್ವೇಗಗಳ ಬಿರುಗಾಳಿ ಸ್ಥಗಿತವಾಗಿ,




ಅಂತರಂಗದ ಶಾಂತಿ ಅಧಿಕವಾಗುತ್ತದೆ. ತನ್ಮೂಲಕ ಏಕಾಗ್ರತೆ ತೀವ್ರವಾಗಿ, ಅಧ್ಯಯನಕ್ಕೆ ಸಹಾಯಕವಾಗುತ್ತದೆ. ಯೌವ್ವನದಲ್ಲಿಯೇ ಆಧ್ಯಾತ್ಮಿಕತೆಯನ್ನು ಬೆಳೆಸಿಕೊಂಡರೆ ಅದು ಇಡೀ ಜೀವನಕ್ಕೆ ಒಂದು ಸುಭದ್ರ ತಳಹದಿಯಾಗುತ್ತದೆ ಎಂದು ಸ್ವಾಮಿ ನಿತ್ಯಸ್ಥಾನಂದರು ಇದೇ ಪತ್ರಿಕೆಯ ಹಿಂದಿನ ಸಂಚಿಕೆಯೊಂದರಲ್ಲಿ ಹೇಳಿದ್ದಾರೆ.

ಯುವಜನತೆಯೇ ರಾಷ್ಟ್ರವೊಂದರ ಅತ್ಯಮೂಲ್ಯ ಸಂಪತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಹೊಟ್ಟೆಪಾಡಿಗಾಗಿ ಮಾತ್ರ ವಿದ್ಯಾಭ್ಯಾಸ ಎಂಬ ಸ್ವಾರ್ಥ ಉದ್ದೇಶದಿಂದ ಕೂಡಿದ ಶಿಕ್ಷಣವು ಸುಸಂಸ್ಕಾರವಿಲ್ಲದ, ಸಮಾಜದ ಒಳಿತಿಗಾಗಿ ಚಿಂತಿಸದ, ಯಾಂತ್ರಿಕ ಶೈಲಿಯ ಮಾನವರನ್ನು ಮಾತ್ರ ಸೃಷ್ಟಿಸುತ್ತದೆ. ಆದರೆ ಆಧ್ಯಾತ್ಮಿಕ ತಳಹದಿಯುಳ್ಳ ಶಿಕ್ಷಣವು ಸಮಾಜದ ಒಳಿತಿಗಾಗಿ ಶ್ರಮಿಸುವ, ಮಾನವೀಯ ಮೌಲ್ಯಗಳನ್ನು ಹೊಂದಿರುವ, ಉತ್ಸಾಹದಿಂದ ಪುಟಿದೇಳುವ ಶಕ್ತಿಯ ಚೆಂಡುಗಳಂತಿರುವ ಯುವಜನತೆಯನ್ನು ನಿರ್ಮಿಸಲು ಪೂರಕವಾಗಿರುತ್ತದೆ.

'ಬೆಳೆಯುವ ಸಿರಿ ಮೊಳಕೆಯಲ್ಲಿಯೇ' ಎಂಬ ಗಾದೆಯನ್ನು ನಾವೆಲ್ಲರೂ ಕೇಳಿದ್ದೇವೆ. ಅದರಂತೆ ಒಬ್ಬ ಶಿಸ್ತು-ಬದ್ಧ, ಪ್ರಾಮಾಣಿಕ ವ್ಯಕ್ತಿಯ ನಿರ್ಮಾಣವಾಗಬೇಕಾದರೆ, ಅವನಿಗೆ ಬಾಲ್ಯದಿಂದಲೇ ಉತ್ತಮ ಸಂಸ್ಕಾರಗಳು ಒದಗಿಬರಬೇಕು. ಆಗ ರೂಢಿಸಿಕೊಂಡ ಉತ್ತಮ ಅಭ್ಯಾಸಗಳೇ ಅವನ ಯೌವನದಲ್ಲಿಯ ಸಾಧನೆಗಳ ತಳಹದಿಯಾಗುತ್ತವೆ. ಉದಾಹರಣೆಗೆ ಛತ್ರಪತಿ ಶಿವಾಜಿ, ಮಹಾತ್ಮಾ ಗಾಂಧಿ, ಸ್ವಾಮಿ ವಿವೇಕಾನಂದ, ನೇತಾಜಿ ಸುಭಾಷ್ ಚಂದ್ರ ಬೋಸ್ ಮೊದಲಾದವರ ಮೇಲೆ ಅವರ ಮಾತೆಯರ ಮಾರ್ಗದರ್ಶನ ಹಾಗೂ ಅವರು ಬೆಳೆದ ಪರಿಸರದ ಪ್ರಭಾವವನ್ನು ಸ್ಪಷ್ಟವಾಗಿ

ಗುರುತಿಸಬಹುದು. ರಾಷ್ಟ್ರಕವಿ ಕುವೆಂಪು ಅವರು ಹೇಳುಎಂತೆ, 'ಪ್ರತಿ ಮಾನವನೂ ಹುಟ್ಟುವಾಗುವ ವಿಶ್ವಮಾನವನೇ. ಆದರೆ ಬೆಳೆಯುತ್ತಿದ್ದಂತೆ ಅವನನ್ನು ನಾವು ಅಲ್ಪಮಾನವನನ್ನಾಗಿ ಮಾಡುತ್ತೇವೆ." ಆದ್ದರಿಂದ ಆಧ್ಯಾತ್ಮಿಕ ವಾತಾವರಣವು ವ್ಯಕ್ತಿಯೊಬ್ಬನನ್ನು ರೂಪಿಸಲು ಅತ್ಯಾವಶ್ಯಕ.

ಇಂದಿನ ಯುವಜನತೆಯಲ್ಲಿ ಹೆಚ್ಚಿನವರು ನಮ್ಮ ಪುರಾತನ ಶ್ರೀಮಂತ ಸಂಸ್ಕೃತಿಯತ್ತ ಅಸಡ್ಡೆ ತೋರುತ್ತಿದ್ದಾರೆ. ಇನ್ನು ಕೆಲವರು ನಮಗಿನ್ನೂ ಏನನ್ನಾದರೂ ಸಾಧಿಸಲು ತುಂಬಾ ಸಮಯವಿದೆ ಎಂದು ಉದಾಸೀನ ತೋರುತ್ತಿದ್ದಾರೆ. ಆದರೆ ನಮಗೆ ಸಿಗುವ ಉಪಯುಕ್ತ ಸಮಯ ಎಷ್ಟು ಕಡಿಮೆಯೆಂಬುದನ್ನು ಈ ಸುಭಾಷಿತದಲ್ಲಿ ಭರ್ತೃಹರಿಯವರು ಹೇಳಿ ಎಚ್ಚರಿಸಿದ್ದಾರೆ:

ಆಯುರ್ವರ್ಷಶತಂ ನೃಣಾಂ ಪರಿಮಿತಂ
ರಾತ್ರೌ ತದರ್ಧಂ ಗತಂ
ತಸ್ಯಾರ್ಧಸ್ಯ ಪರಸ್ಯ ಚಾರ್ಧಮಪರಂ ಬಾಲತ್ವವೃದ್ಧತ್ವಯೋಃ ।
ಶೇಷಂ ವ್ಯಾಧಿವಿಯೋಗದುಃಖಭರಿತಂ ಸೇವಾದಿಭಿರ್ನೀಯತೇ
ಜೀವೇ ವಾರಿತರಂಗಜಚಂಚಲತರೇ ಸೌಖ್ಯಂ
ಕುತಃ ಪ್ರಾಣಿನಾಮ್ ॥

"ಮನುಷ್ಯರ ಆಯುಸ್ಸಿನ ಪರಿಮಿತಿ ಒಂದು ನೂರು ವರ್ಷಗಳು. ಅದರಲ್ಲಿ ಅರ್ಧ ಭಾಗವು ರಾತ್ರಿಯಲ್ಲಿ ಕಳೆದುಹೋಗುತ್ತದೆ. ಉಳಿದ ಅರ್ಧದಲ್ಲಿ ಅರ್ಧ ಬಾಲ್ಯದಲ್ಲಿಯೂ ಮುಪ್ಪಿನಲ್ಲಿಯೂ ಕಳೆದುಹೋಗುತ್ತದೆ. ಇನ್ನುಳಿದುದು ರೋಗ, ವಿರಹ, ದುಃಖ, ಸೇವೆ ಮೊದಲಾದವುಗಳಲ್ಲಿ ಕಳೆದುಹೋಗುತ್ತದೆ. ನೀರಿನ ಅಲೆಗಳಿಗಿಂತಲೂ ಹೆಚ್ಚು ಚಂಚಲವಾದ ಈ ಬಾಳಿನಲ್ಲಿ ಪ್ರಾಣಿಗಳಿಗೆ ಸುಖವೆಲ್ಲಿಯದು?" ಈಗಂತೂ, ನೂರು ವರ್ಷಗಳ ಬಾಳ್ವೆಯೂ ಸಹ ಕಷ್ಟಸಾಧ್ಯವೇ ಆಗಿದೆ. ಆದ್ದರಿಂದ ಆಧ್ಯಾತ್ಮಿಕ ಸಾಧನೆಯನ್ನು ಮುಂದೂಡುವ ಯುವಜನತೆಯ ಪ್ರವೃತ್ತಿ ಹಾಸ್ಯಾಸ್ಪದವೇ ಸರಿ. ಉತ್ತಮ ವ್ಯಕ್ತಿತ್ವ, ಅಧ್ಯಯನಶೀಲತೆ, ಸಚ್ಚಾರಿತ್ರ್ಯ ಮೊದಲಾದವುಗಳನ್ನು ರೂಪಿಸಿಕೊಳ್ಳಲು ಆಧ್ಯಾತ್ಮಿಕ ಸಾಧನೆಯೊಂದೇ ಸುಲಭ ಮಾರ್ಗ ಎಂದರೆ ತಪ್ಪಾಗಲಾರದು.

ಮನುಷ್ಯನು ನಿರ್ವಹಿಸುವ ಪ್ರತಿಯೊಂದು ಕಾರ್ಯವೂ ಸಹ ಆನಂದವನ್ನು ಪಡೆಯುವುದಕ್ಕಾಗಿಯೇ ಅಲ್ಲವೇ? ಆದರೆ ಲೌಕಿಕ ಸುಖಭೋಗಗಳ ಸಹಾಯದಿಂದ ಆ ಪರಮಾನಂದವನ್ನು ಹೊಂದಬಹುದೆಂಬುದು ಕೇವಲ ಕನಸಿನ ಮಾತೇ ಸರಿ. ಜಗತ್ತಿನ ಎಲ್ಲಾ ಸೌಲಭ್ಯಗಳೂ ಶಾಶ್ವತವಾದ ಆನಂದವನ್ನು ನೀಡಲಾರವು. ಆದರೆ ನಮ್ಮೆಲ್ಲಾ ಕಾರ್ಯಗಳ ನಿಯಂತ್ರಕ, ನಮ್ಮೆಲ್ಲರ ಒಳಗೆ ಪ್ರತಿಷ್ಠಿತನಿರುವ, ನಮ್ಮ ಅಂತಸ್ಸಾಕ್ಷಿಯಾದ ಆತ್ಮನ ಅಂತರಾರ್ಥವನ್ನು ತಿಳಿದರೆ ಮಾತ್ರ ಶಾಶ್ವತವಾದ ಪರಮಾನಂದ ನಮ್ಮದಾಗುತ್ತದೆ. ವಾಸ್ತವವಾಗಿ ನಮ್ಮೆಲ್ಲರ ಜೀವನದ ಗುರಿಯೂ ಇದೇ ಆಗಿದೆ. ದೇವರಲ್ಲಿ ನಂಬಿಕೆ ಇದ್ದವರು ಪೂಜೆ, ಯಜ್ಞ-ಯಾಗಾದಿಗಳ ಮೂಲಕ ಈ ಗುರಿಯನ್ನು ಸಾಧಿಸಬಹುದು; ಇಲ್ಲದವರು ಪ್ರಕೃತಿಯಲ್ಲಿ ಜರುಗುವ ಚಟುವಟಿಕೆಗಳನ್ನು ಗಮನಿಸಿ, ಅದರ ಆರಾಧಕರಾಗಿ ಉತ್ತುಂಗಕ್ಕೇರಬಹುದು.

ಯುವಜನತೆಯಲ್ಲಿ ಹೊಸದನ್ನು ತಿಳಿಯುವ ಪ್ರವೃತ್ತಿ, ಸಮಸ್ಯೆಗಳನ್ನು ಪರಿಹರಿಸಲು ಬೇಕಾದ ಛಲ, ಸಾಹಸ ಮನೋಭಾವಗಳು ಅಧಿಕವಾಗಿ ಇರುತ್ತವೆ. ಇವುಗಳಿಗೆ ಪೂರಕವಾಗಿ ಅವರಿಗೆ ಆಧ್ಯಾತ್ಮಿಕ ತಳಹದಿಯಿದ್ದರೆ, ಸುಸಂಸ್ಕೃತ ಸಮಾಜ ನಿರ್ಮಾಣದೊಡನೆ ಪ್ರತಿಯೊಬ್ಬರ ಏಳಿಗೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಸ್ವಸ್ಥ ಸಮಾಜದ ಕಲ್ಪನೆ ಸಾಕಾರಗೊಂಡರೆ ಇಲ್ಲಿಯೇ ಸ್ವರ್ಗವನ್ನು ಕಾಣಬಹುದು. ಸ್ವಾಮಿ ವಿವೇಕಾನಂದರು ಒಂದೆಡೆ ಈ ವಿಚಾರವಾಗಿ ಹೀಗೆ ಬರೆದಿದ್ದಾರೆ: "ನಮ್ಮೆಲ್ಲರ ಒಳಗೂ ಸ್ವತಂತ್ರವಾದುದು, ಶಾಶ್ವತವಾದುದು ಒಂದಿದೆ. ಅದು ದೇಹವೂ ಅಲ್ಲ, ಮನಸ್ಸೂ ಅಲ್ಲ. ಈ ದೇಹವಾದರೋ ಪ್ರತಿಕ್ಷಣ ಸಾಯುತ್ತಿರುತ್ತದೆ. ನಮ್ಮ ಮನಸ್ಸೂ ಸಹ ನಿರಂತರ ಬದಲಾಗುವ ಗತಿಯುಳ್ಳದ್ದು. ದೇಹ ಒಂದು ಸಂಘಾತ, ಹಾಗೆಯೇ ಮನಸ್ಸೂ ಕೂಡ. ಬದಲಾಗದ ಸ್ಥಿತಿಯನ್ನು ಅವು ಮುಟ್ಟಲಾರವು. ಆದರೆ ಈ ಕ್ಷಣಿಕವಾದ ಸ್ಥೂಲ ಕೋಶದ ಹಿಂದೆ, ಮನಸ್ಸೆಂಬ ಸೂಕ್ಷ್ಮ ಆವರಣದ ಆಚೆಯಲ್ಲಿ ಸ್ವತಂತ್ರನಾದ, ಶಾಶ್ವತನಾದ ಆತ್ಮನಿರುವನು. ಅವನ ಸ್ವಾತಂತ್ರ್ಯವೇ ಮನಸ್ಸು-ದೇಹ-ಆವರಣಗಳ ಮೂಲಕ ಹೊರಸೂಸುತ್ತಾ ನಾಮ-ರೂಪಗಳ ತೋರಿಕೆ ಇದ್ದಾಗ್ಯೂ, ತನ್ನ ಅಖಂಡ ಅಸ್ತಿತ್ವವನ್ನು ಪ್ರತಿಪಾದಿಸುತ್ತಿರುವುದು. ಅವನ ಸಾವಿಲ್ಲದ ಸ್ಥಿತಿ, ಆನಂದ, ಶಾಂತಿ, ದಿವ್ಯತೆಗಳು ಅಜ್ಞಾನದ ದಪ್ಪ ಆವರಣವಿದ್ದರೂ ಸಹ ಹೊರಗೆ ಪ್ರಕಾಶಿಸುವುದು. ಅವನೇ ನಿಜವಾದ ಮನುಷ್ಯ—ಅಭಯ, ಅಮರ ಮತ್ತು ಸ್ವತಂತ್ರ. ಸ್ವತಂತ್ರನಾದ ಅಪರಿಣಾಮಿಯಾದ ಈ ಆತ್ಮನು ಎಲ್ಲ ಮಿತಿಯನ್ನೂ ಮೀರಿರುವನು. ಆದ್ದರಿಂದ ಅವನಿಗೆ ಜನನ ಮರಣಗಳಿಲ್ಲ." ಈ ಮೇಲಿನ ವಿಚಾರ ಕ್ಲಿಷ್ಟವೆನಿಸಿದರೂ ಸಹ ಇದೇ ಪ್ರತಿಯೊಂದು ಜೀವಿಯೂ ತಿಳಿದಿರಲೇಬೇಕಾದ ಪರಮಸತ್ಯ. ಹೀಗಾಗಿ ಪ್ರತಿಯೊಂದು ಜೀವವೂ ದೇವಾಂಶಸಂಭೂತ. ಈ ಒಳಗಿನ ದಿವ್ಯತೆಯನ್ನು ವ್ಯಕ್ತಪಡಿಸುವುದೇ ಜೀವನದ ಗುರಿಯಾಗಿದೆ. **ಏಕಂ ಸತ್ ವಿಪ್ರಾ ಬಹುಧಾ ವದಂತಿ** ಎನ್ನುವಂತೆ ಇದನ್ನು ತಿಳಿಯಲು, ಪ್ರಪಂಚದಲ್ಲಿರುವ ವಿವಿಧ ಧರ್ಮಗಳು ವಿಧ ವಿಧವಾದ ಮಾರ್ಗಗಳನ್ನು ತೋರಿಸಿಕೊಟ್ಟಿವೆ.

ಪ್ರತಿಯೊಬ್ಬ ಸಾಮಾನ್ಯ ಮನುಷ್ಯನ ಮಹದಾಸೆಗಳ ಮಹಾಪೂರವೇ ಹರಿಯುತ್ತಿರುತ್ತದೆ. ಅದರಲ್ಲೂ ವಿಶೇಷವಾಗಿ ಬಾಲ್ಯಾವಸ್ಥೆಯಿಂದ ಯೌವನದೆಡೆಗೆ ಈಗ ತಾನೇ ಕಾಲಿಟ್ಟ ಯುವಜನರಲ್ಲಿ ಏನನ್ನಾದರೂ ಸಾಧಿಸುವ, ಅಮೂಲ್ಯ ವಸ್ತುಗಳನ್ನು ಪಡೆಯುವ ಹಂಬಲ ತೀವ್ರವಾಗಿರುತ್ತದೆ. ಆದರೆ ಜೀವನದಲ್ಲಿ ಎಲ್ಲವೂ ನಾವು ಅಂದುಕೊಂಡಂತೆ ನಡೆಯುವುದಿಲ್ಲವಷ್ಟೇ? ನಾವು ಯೋಚಿಸಿದ್ದಕ್ಕೆ ಪ್ರತಿಕೂಲವಾಗಿ ನಡೆಯುವ ಸನ್ನಿವೇಶಗಳನ್ನು ಸ್ಥಿತಪ್ರಜ್ಞೆಯಿಂದ ಸ್ವೀಕರಿಸುವ ಛಾತಿ ಹೊಂದಬೇಕು. ಈ ರೀತಿಯಾದ ಮನಃಸ್ಥಿತಿಯನ್ನು ಹೊಂದಲು ವೈರಾಗ್ಯವನ್ನು ಬೆಳೆಸಿಕೊಳ್ಳಬೇಕು. ಹಾಗಾದರೆ, ವೈರಾಗ್ಯ ಎಂದರೇನು ಎಂಬ ಪ್ರಶ್ನೆ ಮೂಡಿಬಂದಾಗ—ಜೀವನದಲ್ಲಿ ಉಂಟಾಗುವ ಮಾನ-ಅಪಮಾನ, ಸುಖ-ದುಃಖ, ಸೋಲು-ಗೆಲುವು ಮೊದಲಾದವುಗಳನ್ನು ನಿರ್ವಿಕಾರವಾಗಿ, ಹಿಗ್ಗದೇ ಅಥವಾ ಕುಗ್ಗದೇ ಸ್ವೀಕರಿಸಿ ಪ್ರತಿಕ್ಷಣವೂ ಪರಮಾನಂದದಲ್ಲಿ ತೇಲಾಡುವಂತೆ ಜೀವಿಸುವುದು—ಎಂಬುದಾಗಿ ಅರ್ಥೈಸಬಹುದು. ಹಾಗೆಂದ ಮಾತ್ರಕ್ಕೇ ವೈರಾಗ್ಯ ಮೂಡಿಬರಲು ಕಾಡಿಗೆ ಅಥವಾ ಹಿಮಾಲಯಕ್ಕೆ ಹೋಗಿ ತಪೋನಿರತರಾಗಬೇಕೆಂದೇನೂ ಇಲ್ಲ. ಕಾಮ–ಕ್ರೋಧಾದಿಗಳನ್ನು ಜಯಿಸಿದವನು ಮನೆಯಲ್ಲಿಯೇ ವಿರಕ್ತ ಜೀವನ ನಡೆಸಬಹುದು. ಅದಿಲ್ಲದವನು ಕಾಡಿಗೆ ಹೋದರೂ ವೈರಾಗ್ಯ ನೆಲೆಗೊಳ್ಳದು.

ವಿಷಯಸುಖಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಜೀವಿಸಲು ಬಲ್ಲವನನ್ನು ಈ ಪ್ರಪಂಚದ ಕಷ್ಟಗಳು ಬಾಧಿಸಲಾರವು. ಅರ್ಥಾತ್, ಅವನು ಈ ಸಂಸಾರದಲ್ಲಿ ತಾವರೆಯ ಎಲೆಯ ಮೇಲಿರುವ ನೀರಿನ ಹನಿಯಂತೆ ಯಾವುದಕ್ಕೂ ಅಂಟಿಕೊಳ್ಳದೇ ಜೀವಿಸುತ್ತಿರುತ್ತಾನೆ. ಈ ಸ್ಥಿತಿಯು ಅಜ್ಞಾನಿಗಳಿಗೆ ಜಡತ್ವದಂತೆ ತೋರಿದರೂ ಸಹ ಆತನು ಮಾತ್ರ ಸದಾ ಪರಮಾನಂದದಲ್ಲಿ ತೇಲಾಡುತ್ತಿರುತ್ತಾನೆ. ಇಂತಹ ಮನಃಸ್ಥಿತಿಯು ವಿಶೇಷವಾಗಿ ಯುವಜನತೆಗೆ ಖಂಡಿತ ಆವಶ್ಯಕ. ಇದರತ್ತ ಸಾಧನೆಗೈಯುವ ಮನಸ್ಸು ಮಾಡಿದರೆ ಇತ್ತೀಚಿನ ದಿನಗಳಲ್ಲಿ ಯುವಜನತೆಯಲ್ಲಿ ಹೆಚ್ಚುತ್ತಿರುವ ಖಿನ್ನತೆ, ಗೀಳು ಮೊದಲಾದ ಮಾನಸಿಕ ರೋಗಗಳೂ, ಹಿಂಸಾ ಪ್ರವೃತ್ತಿ, ಆತ್ಮಹತ್ಯಾಯತ್ನದಂತಹ ಹತಾಶೆಯ ಸಂಗತಿ ಗಳೂ ಇಲ್ಲವಾಗುವುದರಲ್ಲಿ ಸಂದೇಹವಿಲ್ಲ. ಇದೇ ಅಂಶವನ್ನು ಆಂಗ್ಲ ಭಾಷೆಯ **'Hope for the best, Prepare for the worst'** ಎಂಬ ಸರಳವಾದ ಹೇಳಿಕೆಯಲ್ಲಿ ಅಡಕ ಗೊಳಿಸಲಾಗಿದೆ.

ಈ ತತ್ವದಂತೆ ನಡೆವ ಯುವಜನತೆಯು ಮಹತ್ತರವಾದ ಸಾಧನೆಗಳನ್ನು ಸಾಧಿಸಬಲ್ಲರು. ಪಾಶ್ಚಾತ್ಯ ಮನಶ್ಶಾಸ್ತ್ರಜ್ಞರು ಬೇಕಾದಷ್ಟು ಸಂಶೋಧನೆ ನಡೆಸಿದ್ದಾರೆ, ನಿಜ. ಆದರೂ ಅವರಿಗೆ ಮಾನವನನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಅವರು ಒಂದು ವಿಷಯವನ್ನು ಕಂಡುಹಿಡಿದಿರುವರು. ಅದೇನೆಂದರೆ, ಮನುಷ್ಯನ ಬಾಹ್ಯ ಪ್ರಜ್ಞಾವಸ್ಥೆಯು ಅವನ ಸುಪ್ತಪ್ರಜ್ಞೆಯ ಹಿಡಿತದಲ್ಲಿದೆ ಮತ್ತು ಮನಸ್ಸಿನ ಈ ಎರಡು ಅವಸ್ಥೆಗಳಲ್ಲಿ ಹೆಚ್ಚಾಗಿ ಸಾಮರಸ್ಯವಿರುವುದಿಲ್ಲ. ಮನಸ್ಸಿನ ಪ್ರಜ್ಞಾಸ್ತರವು ಉದಾತ್ತ ಆದರ್ಶಗಳ ಕಡೆ ಒಲಿದಿರಬಹುದು, ಆದರೆ ಸುಪ್ತಪ್ರಜ್ಞೆಯು ಕೀಳು ಆಸೆಗಳಿಂದ ತುಂಬಿಹೋಗಿರಬಹುದು. ನಾವು ಪ್ರಜ್ಞಾವಸ್ಥೆಯಲ್ಲಿ ಮಾಡುವ ಕಾರ್ಯ ಮತ್ತು ಚಿಂತನೆಗಳ ವಿರುದ್ಧ ಈ ಸುಪ್ತಪ್ರಜ್ಞೆಯ ಸಂಸ್ಕಾರಗಳು ಕೆಲಸಮಾಡಬಲ್ಲವು. ಆದರೆ ಮನಸ್ಸಿನ ಪ್ರಜ್ಞೆ ಮತ್ತು ಸುಪ್ತಪ್ರಜ್ಞೆ ಇವೆರಡರಲ್ಲೂ ಹೊಂದಾಣಿಕೆಯನ್ನು ಉಂಟುಮಾಡುವುದರಲ್ಲಿ ಆಧುನಿಕ ಮನೋವಿಜ್ಞಾನ ವಿಫಲವಾಗಿದೆ. ಆಧ್ಯಾತ್ಮಿಕ ಸಾಧನೆಯಿಂದ ಮಾತ್ರ ಇವೆರಡರಲ್ಲಿ ಹೊಂದಾಣಿಕೆ ಬರಲು ಸಾಧ್ಯ. ಮೊದಲೇ ಉತ್ಸಾಹಭರಿತರಾಗಿರುವ ಯುವಜನತೆ ಈ ಮನೋವೈಜ್ಞಾನಿಕ ಸತ್ಯವನ್ನು ತಿಳಿದು ಸಾಧನೆಗೆ ಮುಂದಾದರೆ, ಅವರ ಅಂತಃಶಕ್ತಿ ವೃದ್ಧಿಸಿ ಮಾನಸಿಕವಾಗಿ, ಬೌದ್ಧಿಕವಾಗಿ ತುಂಬಾ ಎತ್ತರಕ್ಕೆ ಏರಬಹುದು.

ಅಧ್ಯಾತ್ಮ ಸಾಧನೆಯನ್ನು ಮುಂದುವರೆಸುತ್ತಾ ಹೋದಂತೆ ನಾವೆಲ್ಲರೂ ಒಂದೇ ತೇಜಸ್ಸಿನ ವಿವಿಧ ತುಣುಕುಗಳು ಎಂಬ ಸತ್ಯವು ಸುಸ್ಪಷ್ಟವಾಗಿ ಗೋಚರಿಸುತ್ತಾ ಹೋಗುತ್ತದೆ. ಇದರಿಂದ ಸಮಾಜದಲ್ಲಿ ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ಪಿಡುಗುಗಳು ದೂರವಾಗುತ್ತವೆ. ಮಾನವ ಜೀವನದ ಸಾರ್ಥಕತೆ ಅಡಗಿರುವುದೇ ತ್ಯಾಗ, ಪರೋಪಕಾರ, ದೀನ-ದಲಿತರ ಸೇವೆ, ಗುರು-ಹಿರಿಯರಲ್ಲಿ ಗೌರವ ಮನೋಭಾವ ಮೊದಲಾದ ಆದರ್ಶಗಳಲ್ಲಿ ಎನ್ನುವ ವಿಚಾರದ ಅರಿವಾಗುತ್ತದೆ. ಯುವಜನತೆ ಇಂತಹ ಆದರ್ಶಗಳನ್ನು ತಮ್ಮದಾಗಿಸಿಕೊಂಡರೆ, ನೈತಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸದೃಢವಾದ ಸಮಾಜದ ನಿರ್ಮಾಣವಾಗುತ್ತದೆ. ಈಗ ಹೆಚ್ಚುತ್ತಿರುವ ಅನಾಥಾಶ್ರಮ, ವೃದ್ಧಾಶ್ರಮಗಳ ಸಂಖ್ಯೆ ಕಡಿಮೆಯಾಗಿ ಪ್ರತಿ ಮನೆಯಲ್ಲೂ ಅಶಕ್ತರ, ಹಿರಿಯರ ಆರೈಕೆ ಮಾಡುವ ಮನೋಭಾವ ಜಾಗೃತವಾಗಿ ಅವರಿಗೆ ನೆಮ್ಮದಿ ಲಭಿಸುತ್ತದೆ. ಪೂಜ್ಯರಾದ ಹಿರಿಯರ ಮಾರ್ಗದರ್ಶನದಲ್ಲಿ ನಡೆದರೆ ನಮಗೆ ಶ್ರೇಯಸ್ಸು ಲಭಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.

ಇದನ್ನೆಲ್ಲ ಓದಿದ ನಂತರ ಯುವಜನತೆಯಲ್ಲಿ ತಾವು ಅಧ್ಯಾತ್ಮ ಸಾಧನೆಯನ್ನು ಹೇಗೆ ಪ್ರಾರಂಭಿಸಬೇಕೆಂಬ ಪ್ರಶ್ನೆ ಮೂಡಬಹುದು. ಅದಕ್ಕೆ ಉತ್ತರವಾಗಿ ಪೂಜ್ಯ ಸ್ವಾಮಿ ಯತೀಶ್ವರಾನಂದರು ತಮ್ಮ **ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ**

ಗ್ರಂಥವಲ್ಲಿ ಹೀಗೆ ಮಾರ್ಗದರ್ಶನ ನೀಡಿದ್ದಾರೆ: "ಆಧ್ಯಾತ್ಮಿಕ ಸಾಧನೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ಇರಬೇಕಾದ ಮುಖ್ಯಾಂಶಗಳೆಂದರೆ, ಒಂದು ನಿಯಂತ್ರಿತ ಜೀವನ, ಯುಕ್ತ ಆಹಾರ, ವ್ಯಾಯಾಮ ಮತ್ತು ಲಯಬದ್ಧ ಉಸಿರಾಟ. ಆಹಾರದ ವಿಷಯವಾಗಿ ನೀವೇನನ್ನು ಜೀರ್ಣಿಸಿಕೊಳ್ಳಬಲ್ಲಿರೋ ಅದನ್ನು ಸ್ವೀಕರಿಸಿ. ಪ್ರತಿಯೊಬ್ಬ ಸಾಧಕನೂ ತನಗೆ ಯಾವುದು ಹಿತ ಎಂಬುದನ್ನು ಕಂಡುಕೊಳ್ಳಬೇಕು. ವ್ಯಾಯಾಮ ಆವಶ್ಯಕ. ನಿಮ್ಮ ಹೊಟ್ಟೆ ಮತ್ತು ಮಿದುಳಿನ ಬಗ್ಗೆ ಎಚ್ಚರಿಕೆ ವಹಿಸಿ. ಮಾನಸಿಕ ಮತ್ತು ದೈಹಿಕ ಶಿಸ್ತು ಅಗತ್ಯ. ಪ್ರಜ್ಞಾಪೂರ್ವಕವಾಗಿ, ಬುದ್ಧಿಪೂರ್ವಕವಾಗಿ ಮುಂದುವರಿಯಿರಿ. ಯಾಂತ್ರಿಕವಾಗಿ ಅಲ್ಲ. ಸರಿಯಾದ ಭಾವವನ್ನು ಸೃಷ್ಟಿಸಿಕೊಳ್ಳಿ. ನಿಮ್ಮ ಉಸಿರಾಟದ ಕಡೆ ಗಮನವಿರಿಸಿ. ಇದೇ ಒಂದು ಏಕಾಗ್ರತೆಯಾಗುತ್ತದೆ. ಉಸಿರಾಟವನ್ನು ನಿಗ್ರಹಿಸಿದಾಗ, ಮನಸ್ಸು ತನ್ನ ನೆಲೆಗೆ ಹಿಂದಿರುಗುತ್ತದೆ." ಈ ನುಡಿಮುತ್ತುಗಳು ಯುವ ಸಾಧಕರಿಗೆ ದಾರಿದೀವಿಗೆಯಿದ್ದಂತೆಯೇ ಸರಿ.

ಕೊನೆಯದಾಗಿ, ಪ್ರತಿಯೊಬ್ಬ ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಆಧ್ಯಾತ್ಮಿಕ ತಳಹದಿ ಅತಿ ಮುಖ್ಯ. ವಿಶೇಷವಾಗಿ ಯುವಜನತೆಗೆ ಶಾಂತಿ, ಸೌಹಾರ್ದತೆ, ಸುಭಿಕ್ಷೆಗಳಿಂದ ಕೂಡಿದ ಪ್ರಪಂಚದ ಕಲ್ಪನೆಯನ್ನು ಸಾಕಾರಗೊಳಿಸಿಕೊಳ್ಳಲು ಆಧ್ಯಾತ್ಮಿಕ ಹಿನ್ನೆಲೆ ತುಂಬಾ ಅವಶ್ಯಕವಾಗಿದೆ. ಇದನ್ನೆಲ್ಲ ಮನಗಂಡು ಪ್ರತಿಯೊಬ್ಬರೂ ಸ್ವಲ್ಪವಾದರೂ ಈ ದಿಕ್ಕಿನಲ್ಲಿ ಮನ ಮಾಡಿದರೆ, ಮಹತ್ತರವಾದ ಸತ್ಪರಿವರ್ತನೆಗಳು ಖಂಡಿತ ಉಂಟಾಗುತ್ತವೆ. ನಾವೆಲ್ಲರೂ ಈ ನಿಟ್ಟಿನಲ್ಲಿ ಮುನ್ನಡೆಯುವ ಮನಸ್ಸು ಮಾಡೋಣ, ತನ್ಮೂಲಕ ಉನ್ನತಿ ಹೊಂದೋಣ. ಆಧ್ಯಾತ್ಮಿಕ ಹಿನ್ನೆಲೆಯನ್ನು ಹೊಂದಿರುವ, ವೈಜ್ಞಾನಿಕ ಮನೋಭಾವದ ಯುವಜನತೆಯಿಂದ ನಮ್ಮೆಲ್ಲರ ಆದರ್ಶ ವಿಶ್ವದ ಕಲ್ಪನೆಯು ಸಾಕಾರಗೊಳ್ಳುವುದನ್ನು ನಿರೀಕ್ಷಿಸೋಣ. ಈ ಬ್ರಹ್ಮಾಂಡವನ್ನೆಲ್ಲ ನಿಯಂತ್ರಿಸುವ ಆ ದಿವ್ಯ ಮಹಾಶಕ್ತಿಯು ನಮ್ಮೆಲ್ಲರನ್ನೂ ಈ ವಿಚಾರದಲ್ಲಿ ಪ್ರೇರಿಸುವಂತೆ ಪ್ರಾರ್ಥಿಸೋಣ. ✪

## ಪ್ರಹಸನ ಪ್ರಸಂಗ

ಮನೆಯೊಂದು ಬೆಂಕಿ ಹತ್ತಿಕೊಂಡು ಉರಿಯುತ್ತಿತ್ತು. ಎಲ್ಲೆಲ್ಲೂ ಹೊಗೆ, ಬೆಂಕಿಯ ಧಗೆ! ಅಂತಹ ಭೀಕರ ದೃಶ್ಯವನ್ನು ನೋಡುತ್ತಿದ್ದವರೆಲ್ಲ 'ಅಯ್ಯೋ ಪಾಪ' ಎಂದು ಸಂತಾಪ ಸೂಚಿಸುತ್ತಿದ್ದರು. ಕೆಲವರು ನೀರನ್ನು ಎರಚುತ್ತಿದ್ದರು. ಒಳಗಿನಿಂದ 'ಕಾಪಾಡಿ' ಎಂಬ ದನಿ ಕೇಳಿಬರುತ್ತಿತ್ತು. ಎಲ್ಲಿಂದಲೋ ಬಂದ ಒಬ್ಬ ವ್ಯಕ್ತಿ ಇದ್ದಕ್ಕಿದ್ದಂತೆ ಮನೆಯೊಳಗೆ ನುಗ್ಗಿ ಕೋಣೆಯಲ್ಲಿದ್ದ ಮನೆಯೊಡೆಯನನ್ನು ಎತ್ತಿಕೊಂಡು ಬಂದು ಕಾಪಾಡಿದನು. ಜನರೆಲ್ಲ ಮೆಚ್ಚುಗೆಯನ್ನು ಸೂಚಿಸುತ್ತ ಮನೆಯೊಡೆಯನ ಅರ್ರೈಕೆಯನ್ನು ಮಾಡುತ್ತಿದ್ದ ಆ ವ್ಯಕ್ತಿಯ ಧೀರತನವನ್ನು ಪ್ರಶಂಸಿಸುತ್ತಿದ್ದಾಗ ಆತ ತನ್ನಷ್ಟಕ್ಕೇ ಹೇಳಿಕೊಳ್ಳುತ್ತಿದ್ದ: "ಸದ್ಯ ಬದುಕಿಕೊಂಡ. ನನ್ನಿಂದ ಹತ್ತು ಸಾವಿರ ರೂಪಾಯಿ ಸಾಲ ತೆಗೆದುಕೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನಲ್ಲ! ಬಿಟ್ಟೇನೇ ನಾನು! ಹಣವನ್ನು ಕೊಡುವ ತನಕ ಸಾಯಲೂ ಬಿಡುವುದಿಲ್ಲ!"

* * *

ಪಾದ್ರಿಯು ಬಾಲಕನನ್ನು ಪ್ರಶ್ನಿಸಿದ, "ನಿನ್ನನ್ನು ಯಾರು ಮಾಡಿದರೆಂದು ಹೇಳಬಲ್ಲೆಯಾ ಮಗು?"

ಬಾಲಕ ಸ್ವಲ್ಪ ಹೊತ್ತು ಆಲೋಚಿಸಿ, ಪಾದ್ರಿಯತ್ತ ನೋಡಿ ಹೇಳಿದ, "ದೇವರು ನನ್ನ ಒಂದು ಭಾಗವನ್ನು ಮಾಡಿದ."

"ಅದೇನು ಕೇವಲ ಒಂದು ಭಾಗವನ್ನು ಮಾತ್ರ ಮಾಡಿದ ಎನ್ನುತ್ತಿರುವೆ?" ಪಾದ್ರಿ ಆಶ್ಚರ್ಯದಿಂದ ಕೇಳಿದ.

"ದೇವರು ನನ್ನನ್ನು ಪುಟ್ಟವನನ್ನಾಗಿ ಮಾಡಿದ್ದ. ಈಗ ನಾನೇ ಇಷ್ಟೆತ್ತರ ಬೆಳೆದಿಲ್ಲವೇ?" ಬಾಲಕ ಉತ್ತರಿಸಿದ.

* * *

ಸಿಗರೇಟು ಸೇದುತ್ತಿದ್ದ ವಿದ್ಯಾರ್ಥಿಯೊಬ್ಬನನ್ನು ಕಾಲೇಜಿನ ಹಿರಿಯ ಅಧ್ಯಾಪಕಿ ಒಂದು ದಿನ ಹಿಡಿದುಬಿಟ್ಟರು. ಹೇಗಾದರೂ ಮಾಡಿ ಅವನನ್ನು ಆ ದುಶ್ಚಟದಿಂದ ಬಿಡಿಸಬೇಕೆಂಬ ಬಯಕೆಯಿಂದ, "ನೀನು ನನ್ನ ಮಗನಾಗಿದ್ದರೆ ಈಗಲೇ ವಿಷ ಕೊಟ್ಟುಬಿಡುತ್ತಿದ್ದೆ" ಎಂದರು. ಯುವಕ ತಕ್ಷಣ, "ನಿಮ್ಮಂತಹವರು ನನ್ನ ತಾಯಿಯೇ ಆಗಿದ್ದ ಪಕ್ಷದಲ್ಲಿ ನಾನು ಅದನ್ನು ಕೂಡಲೇ ಕುಡಿದುಬಿಡುತ್ತಿದ್ದೆ" ಎಂದ.

* * *

ಒಂದು ದೊಡ್ಡ ಸಂಸ್ಥೆಯ ಅಧ್ಯಕ್ಷ ತನ್ನ ಕೆಲಸದವರಲ್ಲಿ ಜವಾಬ್ದಾರಿಯ ಭಾವವನ್ನು ಮೂಡಿಸಲು ಹಲವಾರು ಕಡೆಗಳಲ್ಲಿ "ಮಾಡುವುದನ್ನು ಇಂದೇ ಮಾಡು" ಎಂದು ಬೋರ್ಡ್ ಬರೆಸಿ ತೂಗುಹಾಕಿಸಿದ. ಕೆಲವು ವಾರಗಳ ನಂತರ ಅವನ ಸ್ನೇಹಿತನು ಆಫೀಸಿಗೆ ಬಂದಾಗ ಈ ಫಲಕಗಳನ್ನು ಕಂಡು "ಇದರ ಪರಿಣಾಮ ಏನಾಯಿತು? ನಿನ್ನ ಕೆಲಸದವರೆಲ್ಲ ನಿಷ್ಠೆಯಿಂದ, ಹೆಚ್ಚು ಉತ್ಸಾಹದಿಂದ ದುಡಿಯುತ್ತಿರುವರೇ?" ಎಂದು ಪ್ರಶ್ನಿಸಿದ. "ನಾನು ಬಯಸಿದಂತೆ ಆಗಲಿಲ್ಲಯ್ಯಾ! ಹಣದ ಅಧಿಕಾರಿ ೩೦,೦೦೦ ರೂಪಾಯಿಗಳೊಂದಿಗೆ ಪರಾರಿಯಾದ, ಮತ್ತೊಬ್ಬ ತನ್ನ ಜೊತೆ ಕೆಲಸ ಮಾಡುತ್ತಿದ್ದ ಮಹಿಳೆಯನ್ನೇ ಮದುವೆಯಾದ, ಮೂವರು ಕ್ಲರ್ಕ್‌ಗಳು ಸಂಬಳ ಹೆಚ್ಚಿಸಬೇಕೆಂದು ಮುಷ್ಕರ ಹೂಡಿದ್ದಾರೆ!" ಎಂದ ಪೆಚ್ಚುಮೋರೆಯ ಅಧ್ಯಕ್ಷ. ✪